ಕರ್ನಾಟಕ ಸರ್ಕಾರ

ದಿನಾಂಕ: 16-8-2017

# ಇಂದಿರಾ ಕ್ಯಾಂಟಿನ್ ಲೋಕಾರ್ಪಣೆ




ಬೆಂಗಳೂರು ಆಗಸ್ಟ್ 16

ಕರ್ನಾಟಕ ಸರ್ಕಾರದ ಮಹಾತ್ವಾಕಾಂಕ್ಷೆ ಯೋಜನೆಯಾದ ಇಂದಿರಾ ಕ್ಯಾಂಟಿನ್ ಬಡವರ ಪರವಾದ ಕಾರ್ಯವಾಗಿದ್ದು, ಘೋಷಣೆಯಾಗಿ ಕೇವಲ 60 ದಿನಗಳಲ್ಲಿ ಬೆಂಗಳೂರಿನ 198 ವಾರ್ಡುಗಳ ಪೈಕಿ 101 ಕ್ಯಾಂಟೀನ್‌ಗಳನ್ನು ಇಂದು ಲೋಕಾರ್ಪಣೆಗೊಂಡಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹರ್ಷ ವ್ಯಕ್ತಪಡಿಸಿದರು.

ಇಂದು ನಗರದ ಜಯನಗರ ವ್ಯಾಪ್ತಿಯ ಕನಕನಪಾಳ್ಯ ಪ್ರದೇಶದಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ ಮಾತನಾಡಿದ ಅವರು, ಹಸಿದವರಿಗಷ್ಟೇ ಗೊತ್ತು ಅನ್ನದ ಬೆಲೆ, ಕರ್ನಾಟಕವನ್ನು ಹಸಿವು ಮುಕ್ತ ರಾಜ್ಯವನ್ನಾಗಿಸುವ ನಿಟ್ಟಿನಲ್ಲಿ ಈಗಾಗಲೇ ಅನ್ನಭಾಗ್ಯದಂತಹ ಯೋಜನೆ ಜಾರಿಯಲ್ಲಿದೆ. ಬೆಂಗಳೂರಿನಲ್ಲಿ ದುಡಿಯುವ ವರ್ಗಕ್ಕೆ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಆಹಾರವನ್ನು ನೀಡುವ ಗುರಿಯೊಂದಿಗೆ ಇಂದಿರಾ ಕ್ಯಾಂಟೀನ್ ತೆರೆಯಲಾಗಿದೆ.

ಸ್ಥಳಾವಕಾಶದ ಅಭಾವದಿಂದ ಇನ್ನೂ ಬಾಕಿ ಉಳಿದಿರುವ 97 ಕ್ಯಾಂಟೀನ್‌ಗಳನ್ನು ಸೂಕ್ತ ಕ್ರಮ ಕೈಗೊಂಡು ಅಕ್ಟೋಬರ್ 2, ಗಾಂಧೀ ಜಯಂತಿಯಂದು ಉದ್ಘಾಟಿಸಲಾಗುವುದು.

ಬೆಂಗಳೂರಿನಲ್ಲಿ ಆರಂಭಗೊಂಡಿರುವ ಇಂದಿರಾ ಕ್ಯಾಂಟೀನ್‌ಗಳನ್ನು ಮುಂದಿನ ದಿನಗಳಲ್ಲಿ ಜಿಲ್ಲಾ ಕೇಂದ್ರಗಳಿಗೂ ವಿಸ್ತರಿಸುವ ಯೋಜನೆ ಸರ್ಕಾರಕ್ಕಿದೆ.

ಇಂದಿರಾಗಾಂಧಿ ಅವರು ಬಡವರಿಗಾಗಿ 'ಗರೀಬಿ ಹಟಾವೋ'ದಂತಹ ಘೋಷಣೆ ಮೂಲಕ ದೇಶದಲ್ಲಿ ಬಡವರ ಬದುಕಿನಲ್ಲಿ ಸಂಚಲನವನ್ನು ಮೂಡಿಸಿದ್ದರು.  ಅದೇ ರೀತಿ ನಮ್ಮ ಸರ್ಕಾರ ಹಸಿವು ಹಟಾವೋ ಘೋಷಣೆಯನ್ನು ಬದ್ಧತೆಯಿಂದ ನಿರ್ವಹಿಸುತ್ತಿದೆ. ಇಂದಿರಾಗಾಂಧಿ ಅವರ ಜನ್ಮಶತಮಾನೋತ್ಸವ ಸವಿ ನೆನಪಿನಲ್ಲಿ ಅವರ ಹೆಸರನ್ನು ಈ ಕ್ಯಾಂಟೀನ್‌ಗೆ ಇಡಲಾಗಿದೆ ಎಂದು ಹೇಳಿದರು.

ಬಡವರ ಪರ ಕಾರ್ಯಕ್ರಮಗಳು ಬಡವರಿಗೆ ಮಾತ್ರ ಅರ್ಥವಾಗುತ್ತದೆ.  ಬಡವರ ಕಾರ್ಯಗಳನ್ನು ಟೀಕಿಸುವ ಹೊಟ್ಟೆ ತುಂಬಿದವರಿಗೆ ಇವುಗಳೆಲ್ಲ ಅರ್ಥವಾಗುವುದಿಲ್ಲ. ಕ್ಯಾಂಟೀನ್ ಕಲ್ಪನೆ ತಮಿಳುನಾಡಿನಿಂದ ಕದ್ದಿದ್ದು ಎಂದು ಹೇಳುವ ವಿರೋಧಿಗಳಿಗೆ ಉತ್ತಮ ಯೋಜನೆಗಳನ್ನು ಅಳವಡಿಸಿಕೊಳ್ಳುವುದು ಮತ್ತು ಬಡವರ ಪರ ಯೋಜನೆಗಳನ್ನು ಜಾರಿಗೆ ತರುವುದು ತಪ್ಪಲ್ಲ ಎಂದು ಹೇಳಿದರು.

ಲೋಕಸಭಾ ಸದಸ್ಯರು ಹಾಗೂ ಎಐಸಿಸಿ ಉಪಾಧ್ಯಕ್ಷರೂ ಆದ ರಾಹುಲ್ ಗಾಂಧಿ ಅವರು ಮಾತನಾಡಿ ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಅನ್ನಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲ.  ದೇಶದ ನಾನಾ ರಾಜ್ಯದ ಜನರು ದುಡಿಯುವುದಕ್ಕಾಗಿ  ಬೆಂಗಳೂರಿಗೆ ಆಗಮಿಸಿ ಜೀವನ ಕಟ್ಟಿಕೊಳ್ಳುವ ಅನೇಕರಿಗೆ ಈ ತರಹದ ಕ್ಯಾಂಟೀನ್‌ಗಳು ಸಹಾಯವಾಗುತ್ತವೆ ಎಂದರು.

ಕ್ಯಾಂಟೀನ್‌ನಲ್ಲಿ ಆಹಾರದ ಗುಣಮಟ್ಟ ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ಹೇಳಿದ ಅವರು ಸರ್ಕಾರ ಇದರ ಬಗ್ಗೆ ಗಮನಹರಿಸುವಂತೆ ಕೇಳುತ್ತೇನೆ.  ಶ್ರೀಮಂತರಿಗೆ ಆಹಾರದ ಚಿಂತೆ ಇಲ್ಲ ದಿನಗೂಲಿಗಳಿಗಾಗಿ ಉತ್ತಮ ಗುಣಮಟ್ಟದ ಆಹಾರವನ್ನು ಕಡಿಮೆ ಬೆಲೆಯಲ್ಲಿ ನೀಡುವುದು ಇಂದಿರಾ ಕ್ಯಾಂಟೀನ್.

ಇಂದಿರಾಗಾಂಧಿ ಅನ್ನ- ಬಟ್ಟೆ- ಮನೆ ಎಂದಿದ್ದರು. ಅದೇ ರೀತಿ ಕರ್ನಾಟಕ ರಾಜ್ಯ ಸರ್ಕಾರ ಸಹಾ ಬಡವರಿಗಾಗಿ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸ್ಥಳೀಯ ಶಾಸಕ ಆರ್.ವಿ. ದೇವರಾಜ್ ಅವರು ಮಾತನಾಡಿ ಇಂದು ಬೆಂಗಳೂರಿನಲ್ಲಿ ಲೋಕಾರ್ಪಣೆಗೊಂಡ 101 ಇಂದಿರಾ ಕ್ಯಾಂಟೀನ್‌ಗಳು ಹಬ್ಬದ ಉತ್ಸಾಹವನ್ನು ಮತ್ತು ಕಳೆಯನ್ನು ತುಂಬಿದೆ. ಹಸಿದವರಿಗೆ ಅನ್ನ ಹಾಕುವುದು ಪುಣ್ಯದ ಕೆಲಸ, ಒಂದು ಕ್ಯಾಂಟೀನ್‌ನಲ್ಲಿ ಬೆಳಿಗ್ಗೆ ಮಧ್ಯಾಹ್ನ ಮತ್ತು ರಾತ್ರಿ ತಲಾ 300 ಜನರಿಗೆ ಆಹಾರ ನೀಡಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಬೆಂಗಳೂರು ಮಹಾನಗರದ ಮೇಯರ್ ಶ್ರೀಮತಿ ಜಿ. ಪದ್ಮಾವತಿ ಅವರು ದಾನದಲ್ಲಿ ಶ್ರೇಷ್ಠದಾನ ಅನ್ನದಾನವಾಗಿದ್ದು ಇಂತಹ ಮಹತ್ವಾಕಾಂಕ್ಷೆ ಯೋಜನೆಯ ಜವಾಬ್ದಾರಿಯನ್ನು ಬಿ.ಬಿ.ಎಂ.ಪಿ.ಗೆ ನೀಡಿರುವುದಕ್ಕಾಗಿ ಮುಖ್ಯಮಂತ್ರಿಗಳಿಗೆ ಅಭಿನಂದನೆ ತಿಳಿಸಿದರು.

ಬೆಳಿಗ್ಗೆ 5 ರೂ. ಗೆ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿ 10 ರೂ.ಗಳಿಗೆ ಊಟವನ್ನು ನೀಡಲಾಗುತ್ತದೆ. ಹಸಿವು ಮುಕ್ತ ಬೆಂಗಳೂರು ನಮ್ಮ ಗುರಿಯಾಗಿದ್ದು ಕಷ್ಟಪಟ್ಟು ದುಡಿಯುವ ಬಡವರ ಹೊಟ್ಟೆ ತುಂಬಾ ಕಡಿಮೆ ದರದಲ್ಲಿ ಊಟ ಹಾಕುವ ಪುಣ್ಯದ ಕೆಲಸ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಚಿವರುಗಳಾದ ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಯು.ಟಿ. ಖಾದರ್, ಕೆ.ಜೆ. ಜಾರ್ಜ್, ಕೃಷ್ಣಬೈರೇಗೌಡ. ರಾಜ್ಯಸಭಾ ಸದಸ್ಯರಾದ ಆಸ್ಕರ್ ಫರ್ನಾಂಡಿಸ್ ಸೇರಿದಂತೆ ಅನೇಕ ಜನಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು.

-----------------